ಅಧ್ಯಕ್ಷರು,—ಒಬ್ಬ ಅಧಿಕಾರಿ ಇಲ್ಲವೇ ಒಬ್ಬ ವ್ಯಕ್ತಿಯ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದು ಈ ಸದನದ ಸಂಪ್ರದಾಯವಲ್ಲ. ಆದ್ದರಿಂದ ತಾವು ಜನರಲ್ ಆಗಿ ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಆರ್. ಎನ್. ನಾಯಕ್.—ಒಬ್ಬ ಅಧಿಕಾರಿ ಭಿನ್ನವಾದ ರೀತಿಯಲ್ಲಿ ನಡೆದುಕೊಂಡರೆ ಜನರಲ್ ಆಗಿ ಏನಾಗುತ್ತದೆಂಬುದನ್ನು ಹೇಳುತ್ತೇನೆ. ಈ ಅಧಿಕಾರಿ ತನಗೆ ಸಂಬಂಧಪಟ್ಟವರ ಮನೆಯಲ್ಲಿ ಮದುವೆಯಾದರೆ ಇಲ್ಲವೇ ಗೃಹ ಪ್ರವೇಶವಾದರೆ ಇಲ್ಲವೇ ಯಾವುದಾದರೂ ದೇವಸ್ಥಾನಗಳಲ್ಲಿ ಪೂಜೆ ಇದ್ದರೆ ಈ ಪವರ್ ಕಟ್ಟನ್ನು ವಿಧಿಸುವುದಿಲ್ಲ. ಶ್ರೀ ಮಹಾಲ್ದಿವ್ ಎಂಬುವರ ಮನೆ ಗೃಹ ಪ್ರವೇಶದ ಸಮಯದಲ್ಲಿ ಪವರ್ ಕಟ್ ಇರಲಿಲ್ಲ. ಆದರೆ ಬೇರೆ ಸಮಾರಂಭಗಳು ಅಂದರೆ ಇವರಿಗೆ ಸಂಬಂಧಪಡದವರ ಮನೆಗಳಲ್ಲಿ ಏನಾದರು ಸಮಾರಂಭಗಳು ನಡೆದಾಗ ಮಾತ್ರ ಪವರ್ ಕಟ್ ಇರುತ್ತದೆ. ಇದರಿಂದ ಜನರ ಮನಸ್ಸಿನಲ್ಲಿ ಎಂತಹ ಭಾವನೆ ಬರುತ್ತದೆಂಬುದನ್ನು ಸರ್ಕಾರದವರೇ ವಿಚಾರ ಮಾಡಬೇಕು. ರಾಮೇಶ್ವರ ಕಂಬಿ ಮತ್ತು ಕಂಡೋಡಿ ಸ್ಥಳಗಳು ಈ ಅಧಿಕಾರಿಗೆ ಸಂಬಂಧಪಡದ ಕಾರಣ ಅಲ್ಲಿಗೆ ಪವರ್ ಪೂರೈಕೆ ಮಾಡಲು ಕಾನೂನಿನ ತೊಡಕಿದೆ ಎಂದು ಹೇಳುತ್ತಾರೆ. ಆದರೆ ಮಾರಿಕಾಂಬ ದೇವಸ್ಥಾನಕ್ಕೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ರೀ-ಎಸ್ಟಿಮೇಟ್ ಆಗಿ ಅದು ಮೇಲಿನ ಅಧಿಕಾರಿಗಳ ಅನುಮತಿ ಪಡೆಯುವುದಕ್ಕೆ ಮೊದಲೇ ವಿದ್ಯುತ್ ಸರಬರಾಜು ಮಾಡಿದ್ದಾರೆ. ಇದೇ ಕಾರಣದ ಮೇಲೆ ಮುಸಲ್ಮಾನರು ತಮಗೆ ನಮಾಜ್ ಮಾಡಲು ಶುಕ್ರವಾರ ಪೂರ್ತಿ ಕರೆಂಟ್ ಸರಬರಾಜು ಮಾಡಬೇಕು ಮತ್ತು ಕ್ರಿಶ್ಚಿಯನ್ ಜನರು ತನುಗೆ ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಲು ರವಿವಾರ ಪೂರ್ತಿ ಕರೆಂಟ್ ಸರಬರಾಜು ಮಾಡಬೇಕೆಂದು ಹಾಗೆಯೇ ಬೇರೆ ಬೇರೆ ದೇವಸ್ಥಾನಗಳವರೂ ಸಹ ಕೇಳುತ್ತಿದ್ದಾರೆ. ಆದ್ದರಿಂದ ವಾರದ ಎಲ್ಲ ದಿನಗಳಲ್ಲಿಯೂ ಪವರ್-ಕಟ್ ವಿಧಿಸದಿರಲು ಸಾಧ್ಯವಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಈಗಿನ ನಿಯಮದ ಪ್ರಕಾರ ಪವರ್-ಕಟ್ ವಿಧಿಸಲೇ ಬೇಕಾಗಿದ್ದರೆ ಅಲ್ಲಿನ ಅಧಿಕಾರಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಚ್. ಪಟೇಲ್ (ಮಾನ್ಯ ವಿದ್ಯುಚ್ಛಕ್ತಿ ಇಲಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಅಧಿಕಾರಿ ಈ ತರಹ ಪಕ್ಷಪಾತ ಮಾಡುವುದು ಸರಿಯಲ್ಲ. ಒಂದು ದೇವರಿಗೆ ವಿದ್ಯುತ್ ಕೊಟ್ಟು ಇನ್ನೊಂದು ದೇವರಿಗೆ ವಿದ್ಯುತ್ ಕೊಡದೆ ಆ ಅಧಿಕಾರಿ ತಪ್ಪು ಮಾಡಿದ್ದಾರೆ. ದೇವರುಗಳ ಮಧ್ಯೆ ಅವರು ಈ ರೀತಿ ವ್ಯತ್ಯಾಸ ಮಾಡಬಾರದಾಗಿತ್ತು. ಮಾನ್ಯ ಸದಸ್ಯರು ಹೇಳಿದಂತೆ ಅವರು ತಮಗೆ ಬೇಕಾದವರ ಮನೆಗಳಲ್ಲಿ ಮದುವೆಯಾದಾಗ ವಿದ್ಯುತ್ ಸರಬರಾಜು ಮಾಡಿ ತಮಗೆ ಬೇಡದವರ ಮನೆಗಳಲ್ಲಿ ಮದುವೆಯಾದಾಗ ವಿದ್ಯುತ್ ಕಡಿತ ಮಾಡಿದ್ದರೆ, ಅದೂ ಸಹ ತಪ್ಪಾಗುತ್ತದೆ. ಆತ ದುಷ್ಟ ಅಧಿಕಾರಿ ಎಂದು ಕಾಣುತ್ತದೆ ಅವರ ಬಗ್ಗೆ ನಾನು ವಿಚಾರಣೆ ಮಾಡಿಸುತ್ತೇನೆ.

ವಿಷಯ : (vi) ಮಾಜಿ ಸಚಿವರಾದಂಥ ಶ್ರೀ ಇಬ್ರಾಹಿಂರವರ ಮನೆಗೆ ಕೆಲವರು ನುಗ್ಗಿ ದರೋಡೆ ಮಾಡಿರುವ ಬಗ್ಗೆ

ಶ್ರೀ ಎಂ, ವೀರಪ್ಪ ಮೊಯ್ಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಮಾರ್ಚಿ ತಿಂಗಳ 13 ಮತ್ತು 14ನೇ ತಾರೀಖಿನ ಮಧ್ಯ ರಾತ್ರಿಯಲ್ಲಿ ಭದ್ರಾವತಿಯಲ್ಲಿರುವ ಮಾಜಿ ಸಚಿವರಾದಂಥ ಶ್ರೀ ಇಬ್ರಾಹಿಂ ಅವರ ಮನೆಗೆ ಕೆಲವರು ಲಗ್ಗೆ ಹಾಕಿ ಮನೆಯ ಬಾಗಿಲನ್ನು ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಒಡೆದುಹಾಕಿ ಮನೆಯಲ್ಲಿದ್ದ ಸಾಕಷ್ಟು ಸಾಮಾನುಗಳನ್ನು ದರೋಡೆ ಮಾಡಿದ್ದಾರೆ. ಈ ರೀತಿ ಆಪಹರಣ ಮಾಡಿದಂಥ ಯಾರನ್ನೂ ಸಹ ಇಲ್ಲಿಯವರೆಗೆ ಹಿಡಿದಿಲ್ಲ. ಈ ಬಗ್ಗೆ ಪೋಲೀಸರು ಕಾರ್ಯಾಚರಣೆ ನಡೆಸುತ್ತಾರೆಂದುಕೊಂಡು ನಾವು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಆದರೆ ಇಷ್ಟು ದಿವಸಗಳಾದರೂ ಸಹ ಪೋಲೀಸರು ಕ್ರಮ ತೆಗೆದುಕೊಂಡ ಬಗ್ಗೆ ಯಾವ ಒಂದು ಸುಳಿವೂ ಸಹ ಇಲ್ಲ. ಇದಕ್ಕೆ ಕಾರಣವೇನೆಂದು ಗೃಹ ಇಲಾಖೆಯವರು ಹೇಳಬೇಕು.

ಬಹಳ ಹೊತ್ತಿನ ನಂತರ ಪೋಲೀಸಿನವರು ಪೋಲೀಸ್ ನಾಯಿಗಳ ಜೊತೆಯಲ್ಲಿ ಬಂದು, ಇಬ್ರಾಹಿಂ ಅವರ ಮನೆಗೆ ಹೋಗಿ ಆ ನಂತರ ಸೀದಾ ಪೋಲೀಸ್ ಸ್ಟೇಷನ್‌ಗೆ ಹೋಗಿದ್ದಾರೆ. How far it is true, it has got to be verified.

Mr. Speaker.—You can give the information.

Sri M. Veerappa Moily.—I am giving the information. This is one of the most interesting cases.

Mr. Speaker.—It has gone to give information to the police.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪೋಲೀಸ್ ನಾಯಿಗಳು ಮನೆಯಲ್ಲಿ ಮೂಸಿ ನೋಡಿವೆ. ಅಲ್ಲಿ ಸಾಕಷ್ಟು ದಾಖಲಾತಿಗಳು ಇವೆ. ಬೆರಳಚ್ಚುಗಳು ಕೂಡ ಗೋಡೆಯಲ್ಲಿ ಇದ್ದು, ಅವರನ್ನು ಹುಡುಕಲಿಕ್ಕೆ ಸಾಧ್ಯವಿದೆ. ಪೋಲೀಸ್ ಸ್ಟೇಷನ್‌ನಿಂದ ಇಬ್ರಾಂ ಅವರ ಮನೆ 100 ಅಡಿ ದೂರದಲ್ಲಿದೆ. ಪೋಲೀಸ್ ಸ್ಟೇಷನ್‌ಗೆ ಅವರ ಮನೆ ಬಹಳ ಹತ್ತಿರದಲ್ಲೂ ಇದೆ, ಒಂದು ಬಾಗಿಲು ಒಡೆಯಬೇಕಾದರೂ ಸುಮಾರು 4 ಗಂಟೆ ಬೇಕು. ಪೋಲೀಸ್ ಸ್ಟೇಷನ್ ಒಳಿಯಲ್ಲಿ ಇರತಕ್ಕ ಮನೆಯ ಬಾಗಿಲು ಹೊಡೆದು, ದರೋಡೆ ಮಾಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಇದುವರೆಗೆ ಯಾರನ್ನೂ ಬಂಧಿಸಿಲ್ಲ. ಇದರ ಬಗ್ಗೆ ಸಮಾಚಾರವೇನೆಂಬುದನ್ನು ನಾವು ತಿಳಿಯಬೇಕಾಗಿದೆ. ಈ ಘಟನೆ ನಡೆದಿದ್ದು 13–14ನೇ ತಾರೀಖು. ಇವತ್ತು 27ನೇ ತಾರೀಖು ಬಂದರೂ ಕೂಡ, ಅನೇಕ ಕುರುಹು ಗಳು ಇದ್ದರೂ ಸಹ ಪೋಲೀಸ್‌ನವರು ಯಾರನ್ನೂ ಬಂಧಿಸಿಲ್ಲ ಎಂದು ಹೇಳಿದರೆ, ಅದು ಸರ್ಕಾರದ ನಿರ್ಲಕ್ಷ್ಯ ಮತ್ತು ಆಸಡ್ಡೆ ತನವನ್ನು ತೋರಿಸುತ್ತಿದೆ ಎಂದು ಹೇಳಬೇಕಾಗಿದೆ. ಈ ಬಗ್ಗೆ ಪೂರ್ಣ ಮಾಹಿತಿ ತರಿಸಿ, ವರದಿಯನ್ನು ಸದನಕ್ಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳವರು).—ಮಾನ್ಯ ಅಧ್ಯಕ್ಷರೆ, ಈ ಘಟನೆ ಯಲ್ಲಿ ಸರ್ಕಾರದ ಆಸಡ್ಡೆಯಾಗಲೀ, ಅಥವಾ ನಿರ್ಲಕ್ಷ್ಯವಾಗಲೀ ಇಲ್ಲವೆಂದು ಪ್ರಾರಂಭದಲ್ಲಿಯೇ ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಘಟನೆ ಆದದ್ದು ನಿಜ. ಆದರೆ ಇದರಲ್ಲಿ ಏನೋ ಒಂದು ರಹಸ್ಯ ಇದ್ದ ಹಾಗೆ ಕಾಣುತ್ತದೆ. ಇದು ಸಾಮಾನ್ಯವಾಗಿ ದರೋಡೆಕೋರರು ಮಾಡುವ ರೀತಿ ಆಗಿಲ್ಲ. ಹಾಗೇನಾ ದರೂ ದರೋಡೆಕೋರರು ಮನೆಯನ್ನು ಒಡೆದು ನುಗ್ಗಿದ್ದರೆ, ಆ ಮನೆಯಲ್ಲಿದ್ದ ಸಾಮಾನುಗಳನ್ನು ಎತ್ತಿ ಕೊಂಡು ಹೋಗಬೇಕಾಗಿತ್ತು. ಸಾಮಾನು ಒಂದನ್ನೂ ಮುಟ್ಟಿಲ್ಲ, ದೊಡ್ಡ ದೊಡ್ಡ ಕಲ್ಲುಗಳಿಂದ ಬಾಗಿಲು ಒಡೆದಿದ್ದಾರೆ. ಒಳಗಡೆ ಇರತಕ್ಕಂಥ ಸೋಫಾ ಸೆಟ್ಟುಗಳನ್ನು ಮತ್ತು ಕುರ್ಚಿಗಳನ್ನು ಮುರಿದಿದ್ದಾರೆ, ಕಿಟಕಿ ಒಡೆದಿದ್ದಾರೆ. ಮನೆಯಲ್ಲಿದ್ದ ಒಂದು ಸಾಮಾನು ಕೂಡ ಕಳವು ಆಗಿಲ್ಲ. ಪೋಲೀಸ್ ನಾಯಿ ಗಳನ್ನು ತೆಗೆದುಕೊಂಡು ಹೋಗಿದ್ದರು. ಆದರೆ ಇದರಲ್ಲಿ ಏನೋ ಒಂದು ರಹಸ್ಯ ಇದೆ. ಮಾನ್ಯ ಮೊಯ್ಲಿಯವರು ಮುಗುಳ್ನಗೆಗೆ ನಗುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಏನು ರಹಸ್ಯ ಇದೆಯೋ ನನಗೆ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪೋಲೀಸ್ ನಾಯಿಗಳು ವಾಸನೆ ನೋಡಿಕೊಂಡು ಪೋಲೀಸ್ ಸ್ಟೇಷನ್‌ಗೆ ಹೋಗಿವೆ.

ಶ್ರೀ ರಾಮಕೃಷ್ಣ ಹೆಗಡೆ.—ಪೋಲೀಸ್ ನಾಯಿಗಳು, ಮನೆಯನ್ನು ಬಿಟ್ಟು ಬೇರೆಲ್ಲೂ ಕರೆದು ಕೊಂಡು ಹೋಗಲಿಕ್ಕೆ ಆಗಿಲ್ಲ. ಪೋಲೀಸ್ ನಾಯಿಗಳು ಕೂಡ ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುವು ದಿಲ್ಲ. ಇದರ ಬಗ್ಗೆ ಸಾಕಷ್ಟು ಮುಂಜಾಗ್ರತೆ ವಹಿಸಿಕೊಂಡು, ಕೇವಲ ಈ ಘಟನೆ ಆಯಿತು ಎಂದು ತೋರಿಸುವುದಕ್ಕೆ ಘಟನೆ ನಡೆದಹಾಗೆ ಕಾಣುತ್ತದೆ. ಈಗ ಏನನ್ನೂ ಖಚಿತವಾಗಿ ಹೇಳಲಾರೆ. ಇದು ವರೆಗೂ ಸುಳಿವು ಸಿಕ್ಕಿಲ್ಲ. ಪೋಲೀಸರು ತನಿಖೆ ಮಾಡುತ್ತಿದ್ದಾರೆ. ಇವತ್ತು ನಮಗೂ ಕೂಡ ಇದರ ಸತ್ಯ ಏನು ಎನ್ನುವುದು ತಿಳಿಯಬೇಕಾಗಿದೆ, ಅವರ ಮನೆಯಲ್ಲಿ ಯಾರೂ ಇರಲಿಲ್ಲ. ಸಾಮಾನ್ಯವಾಗಿ ಅವರ ತಾಯಿ ಮನೆಯಲ್ಲಿ ಇರುತ್ತಿದ್ದರು. ಆ ದಿನ ಅವರ ತಾಯಿ ಬೆಂಗಳೂರಿಗೆ ಬಂದಿದ್ದರು. ಅವರು ಇಲ್ಲದೇ ಇರುವ ಸಮಯ ನೋಡಿಕೊಂಡು ಯಾವುದೇ ದರೋಡೆ ಮಾಡತಕ್ಕ ಉದ್ದೇಶ ಇಲ್ಲದೆ ಕೇವಲ ಬಾಗಿಲು ಒಡೆದು, ಕಿಟಕಿ ಮುರಿದು, ಕೆಲವು ಪೀಠೋಪಕರಣಗಳನ್ನು ಮುರಿದು ಹಾಕಿರುವುದನ್ನು ನೋಡಿದರೆ ಇದರಲ್ಲಿ ಏನೋ ರಹಸ್ಯ ಇದೆ, ಇದನ್ನು ಹೊರಗಡೆ ತೆಗೆಯಬೇಕಾಗಿದೆ.

ಶ್ರೀ ಜಿ. ಕೆ. ವೆಂಕಟ ಶಿವರೆಡ್ಡಿ.—ಮಾನ್ಯ ಅಧ್ಯಕ್ಷರೆ, 24-3-84ರಂದು ನಮ್ಮ ಶ್ರೀನಿವಾಸಪುರ ತಾಲ್ಲೂಕಿನ, ಮಲಮೋಟಿಕಪಲ್ಲಿ ಗ್ರಾಮಕ್ಕೆ ಸೇರಿದ ನರಸಿಂಹಸ್ವಾಮಿ ದೇವಸ್ಥಾನದ ಮಂಟಪ ಕುಸಿದು ಹೂರು ಜನ ಸತ್ತಿದ್ದಾರೆ. ನಾಲ್ಕು ಜನಕ್ಕೆ ತೀವ್ರ ಗಾಯಗಳಾಗಿವೆ. ಆದಕ್ಕೋಸ್ಕರ ಮಾನ್ಯ ಮುಖ್ಯ ಮಂತ್ರಿಗಳ ನಿಧಿಯಿಂದ ಪರಿಹಾರವನ್ನು ಆದಷ್ಟು ಬೇಗ ಕೊಡಬೇಕೆಂದು ತಮ್ಮ ಮೂಲಕ ಮನವಿಮಾಡಿ ಕೊಳ್ಳುತ್ತೇನೆ. ಸತ್ತವರೆಲ್ಲರು ಎಸ್. ಟಿ. ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಹಾಗೂ ಕಡು ಬಡವ ರಾಗಿರುತ್ತಾರೆ. ಅವರ ಹೆಸರುಗಳು ಕೆಳಕಂಡಂತಿವೆ.

1. ಗಾರ ವೆಂಕಟರಮಣ ತಂದೆ ಗಾರ ವೆಂಕಟರಾಯಪ್ಪ, ವಯಸ್ಸು 35 ವರ್ಷ ದೊಮ್ಮರಪಲ್ಲಿ, ಶ್ರೀನಿವಾಸಪುರ ತಾಲ್ಲೂಕು.
2. ಲಕ್ಷ್ಮಣ ತಂದೆ ದೇವಪ್ಪ, ವಯಸ್ಸು 38 ವರ್ಷ, ದೊಮ್ಮರಪಲ್ಲಿ.
3. ವೆಂಕಟಪ್ಪ ತಂದೆ, ನಲ್ಲರಾಮಣ್ಣ, ವಯಸ್ಸು 55 ವರ್ಷ, ದೊಮ್ಮರಪಲ್ಲಿ.

ತೀರ್ವವಾಗಿ ಗಾಯಗೊಂಡಿರುವವರು :

1. ಬೈಯಮ್ಮ ಗಂಡ ಗಾರ ವೆಂಕಟರಾಯಪ್ಪ, ವಯಸ್ಸು 55 ವರ್ಷ, ದೊಮ್ಮರಪಲ್ಲಿ.

2. ಲಕ್ಷ್ಮಣ ತಂದೆ ಗಂಗೂಳಪ್ಪ, ವಯಸ್ಸು 12 ವರ್ಷ, ದೊಮ್ಮರಪಲ್ಲಿ.
3. ವೆಂಕಟರಮಣ ತಂದೆ ಚಿನ್ನಪ್ಪ, ವಯಸ್ಸು 30 ವರ್ಷ, ದೊಮ್ಮರಪಲ್ಲಿ.
4. ಲಕ್ಷ್ಮಣ ತಂದೆ ಬಾಲಪ್ಪ, ವಯಸ್ಸು 35 ವರ್ಷ, ದೊಮ್ಮರಪಲ್ಲಿ.

ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಒಂದು ಮನವಿಯನ್ನು ಕೊಡುತ್ತಿದ್ದೇವೆ. ಆದಷ್ಟು ಬೇಗ ಈ ಕಡು ಬಡವರಿಗೆ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಒಮ್ಮೆಲೇ ಹೇಳಿದರೆ ಹೇಗೆ ಉತ್ತರ ಹೇಳುವುದು ? ವರದಿ ಬಂದಿಲ್ಲ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಕೆ. ವೆಂಕಟ ಶಿವರೆಡ್ಡಿ.—ಅವರು ಕಡು ಬಡವರು .....

ಅಧ್ಯಕ್ಷರು.—ಪರಿಹಾರ ಕೊಡುವ ಬಗ್ಗೆ ವರದಿಬಂದಿಲ್ಲವೆಂದು ಹೇಳುತ್ತಿದ್ದಾರೆ.

ವಿಷಯ : (vii) ಬಿಜಾಪುರ ಜಿಲ್ಲೆ, ಕಾರ್ಕಾಳ ಗ್ರಾಮದ ಲೆಂಕಪ್ಪ ಎಂಬ ವ್ಯಕ್ತಿಯನ್ನು ಪೋಲೀಸಿನವರು ಹೊಡೆದು ಸಾಯಿಸಿರುವ ಬಗ್ಗೆ.

ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆ, ಕಾತ್ರಾಳ ಗ್ರಾಮದ ಲೆಂಕಪ್ಪ ಎಂಬ ವ್ಯಕ್ತಿ ದಿನಾಂಕ : 27-2-1984ರಂದು ತೊಗಲುಬಾಗಿ ಸಂತೆಗೆ ಹೋಗಿದ್ದ. ಅಲ್ಲಿ ಆತ ಸ್ವಲ್ಪ ಕುಡಿದಾಗ ಗಲಾಟೆಯಾಯಿತು.

ಅಧ್ಯಕ್ಷರು.—ಯಾವುದು ಸ್ವಲ್ಪ ?

ಶ್ರೀ ಪಂಪಾಪತಿ.—ಕುಡಿದದ್ದು ಸ್ವಲ್ಪ. ಇಬ್ಬರು ಸಿವಿಲ್ ಡ್ರಸ್ಸಿನಲ್ಲಿ ಪೋಲೀಸಿನವರು ಬಂದರು, ಆತನಿಗೆ ಗೊತ್ತಾಗಲಿಲ್ಲ. ಅವರಿಗೂ ಕೂಡ ಬೈಯ್ದ. ಪೋಲೀಸಿನವರಿಗೆ ಅಪಮಾನವಾಯಿತು. ಆತ ನನ್ನು ಕುರಿ ತುಂಬುವ ಲಾರಿಯಲ್ಲಿ ಹಾಕಿಕೊಂಡು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಪೋಲೀಸ್ ಸ್ಟೇಷನ್‌ನಲ್ಲಿ ಆವತ್ತು ರಾತ್ರಿ ಪೂರಾ ಹೊಡೆದಿದ್ದಾರೆ. ಅವನು ಸಾಯುವಮಟ್ಟಿಗೆ ಹೊಡೆದಿದ್ದಾರೆ. ಬೆಳಿಗ್ಗೆಯವರೆಗೂ ಅವನ ಸ್ಥಿತಿ ಏನೆಂದು ಗೊತ್ತಾಗಲಿಲ್ಲ. ಬೆಳಿಗ್ಗೆ ತಕ್ಷಣ ಜಮಖಂಡಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಅಲ್ಲಿ ಪ್ರಾಣ ಹಾನಿಯಾಗುತ್ತದೆಂದು ಗೊತ್ತಾಗಿ, ಮಾರನೇ ದಿವಸ ಮಂಗಳವಾರ ಹುಬ್ಬಳ್ಳಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಸತ್ತು ಹೋದ. ಅವನ ಹೆಣ ಕೂಡ ವಾಪಸ್ ಕೊಡಲಿಲ್ಲ. ಅವನನ್ನು ಅಲ್ಲಿಯೇ ದಹನ ಮಾಡಿದ್ದಾರೆ. ಅವನಿಗೆ ಇಬ್ಬರು ಮಕ್ಕಳಿದ್ದಾರೆ. ಅವನ ಒಂದು ಜೋಪಡಿ ಮನೆ ಇದೆ. ಅವನ ಪರವಾಗಿ ಒಬ್ಬರು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ. ಪೋಲೀಸಿನವರ ಕೃತ್ಯದಿಂದ ಅವನು ಸಾವನ್ನು ಅಪ್ಪಬೇಕಾಯಿತು. ಮಕ್ಕಳು ಅನಾಥವಾಗಬೇಕಾಯಿತು. ಇಡೀ ರಾಜ್ಯಕ್ಕೆ ಕೆಟ್ಟ ಹೆಸರು ಬರತಕ್ಕ ಪ್ರವೃತ್ತಿಯನ್ನು ಅಲ್ಲಿನ ಪೋಲೀಸ್ ಅಧಿಕಾರಿಗಳು ಅನುಸರಿಸಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

12-30 p.m.

ಯಾರೇ ಇರಲಿ, ಕುಡಿದವರನ್ನು ಆ ರೀತಿಯಾಗಿ ಹೊಡೆಯಬಾರದಾಗಿತ್ತು. ಕೊಲೆಯಾಗುವ ರೀತಿಯಲ್ಲಿ ಅಧಿಕಾರಿಗಳು ಅವನ ಮೇಲೆ ಹಲ್ಲೆ ಮಾಡಿದ್ದಾರೆ ಅದರಿಂದಾಗಿ ಅವನು ಸತ್ತುಹೋಗಿದ್ದಾನೆ. ಆದ್ದರಿಂದ ಇಂತಹವರ ಮೇಲೆ ಸರಕಾರ ತೀವ್ರವಾದ ಕ್ರಮ ಕೈಗೊಳ್ಳಬೇಕು. ಅವನು ತನ್ನ ಮಕ್ಕಳಿಗೆ ತನ್ನ ಸಂಸಾರಕ್ಕೆ ಸ್ವತಃ ದುಡಿದು ಸಂಪಾದನೆ ಮಾಡಿ ಜೀವನ ಮಾಡಬೇಕಿತ್ತು. ಈಗ ಅವನು ಸತ್ತು ಹೋಗಿರುವುದರಿಂದ ಅವನ ಮಕ್ಕಳಿಗೆ ಜೀವನಕ್ಕೆ ಆಧಾರವಾಗಿ ಅವರಿಗೆ ಏನಾದರೂ ಪರಿಹಾರವನ್ನು ಕೊಡಬೇಕೆಂದು ಹೇಳಿ ನಾನು ಮುಖ್ಯಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ. ಅವರು ನನಗೆ ಕಳುಹಿಸಿರತಕ್ಕ ಆರ್ಜಿಯನ್ನೂ ಸಹ ತಮಗೆ ಕಳುಹಿಸಿ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ ಜಿಗಜೀನಗಿ (ಮಾನ್ಯ ಗೃಹಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಸದನದ ಮಾನ್ಯ ಸದಸ್ಯರಾದ ಶ್ರೀ ಪಂಪಾಪತಿಯವರು ನನ್ನ ಜಿಲ್ಲೆಯಂ ಘಟನೆಯ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಕೂಲಂಕುಷವಾದ ವರದಿಯನ್ನು ತರಿಸಿಕೊಂಡು, ಕಾಯಿದೆಯ ಚೌಕಟ್ಟಿನಲ್ಲಿ ಯಾವರೀತಿ ಮಾಡಬೇಕಾಗಿದೆಯೋ ಅದನ್ನು ಮಾಡುತ್ತೇನೆಂದು ಅವರಿಗೆ ಹೇಳಬಯಸುತ್ತೇನೆ.

ಶ್ರೀ ಪಂಪಾಪತಿ.—ಈ ಘಟನೆ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ನಡೆದಿದ್ದು, ಅವರು ಈಗಲೇ ವೈರಲೆಸ್ ಮೂಲಕ ವಿಚಾರವನ್ನು ತಿಳಿದುಕೊಂಡು ಅವರಿಗೆ ಪರಿಹಾರ ಧನವನ್ನು ಕೊಡಬೇಕು. ಅವನ ಹೆಣವನ್ನೂ ಕೂಡ ಪೋಲೀಸರು ಅವನ ಮನೆಯವರಿಗೆ ಕೊಟ್ಟಿಲ್ಲ. ಹೆಣವನ್ನು ಮನೆಯವರಿಗೆ ಕೊಡದೆ ಪೋಲೀಸರೇ ಸುಟ್ಟುಹಾಕಿದ್ದಾರೆ. ಸಾಮಾನ್ಯ ಜನರ ಬದುಕು ಈರೀತಿ ಆದರೆ ಬಹಳ ಕಷ್ಟ ಆಗುತ್ತದೆಂದೂ, ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.